P and SC. 2/2021
PW-2

Date : 14/12/2022

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಖ್ಯ ವಿಚಾರಣೆ – ಶ್ರೀ ಜಿ.ಎಂ.ಜಿ. ವಕೀಲರಿಂದ –**

ನಾನು ಈ ಕೇಸಿನಲ್ಲಿ ಅರ್ಜಿದಾರರ ಪರ ಸಾಕ್ಷಿದಾರನಾಗಿರುತ್ತೇನೆ. ನನ್ನ ಮುಖ್ಯ ಸಾಕ್ಷ್ಯದ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಸಿದ್ದು ಅವು ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ನನ್ನದಾಗಿರುತ್ತದೆ .

ಈ ಅರ್ಜಿಯ ಅರ್ಜಿದಾರರಾದ ಅಶ್ವಥ್ ರವರಿಗೆ ತಿರುಮಲಭೋವಿ ಎನ್ನುವವರು ಮರಣ ಶಾಸನ ಪತ್ರವನ್ನು ಬರೆಯಿಸಲು ಮಾಹಿತಿಗಳನ್ನು ನೀಡಿದ ಪ್ರಕಾರ ನಾನು ಮರಣ ಶಾಸನ ಪತ್ರವನ್ನು ತಯಾರಿಸಿ ಕೊಟ್ಟಿರುತ್ತೇನೆ . ನಂತರದಲ್ಲಿ ಮರಣ ಶಾಸನ ಪತ್ರವನ್ನು ನೋಂದು ಮಾಡಿಸಿಕೊಂಡಿದ್ದಾರೆ ಅಂತ ಗೊತ್ತಾಗಿರುತ್ತದೆ . ಈಗ ನಾನು ನಿಪಿ–3 ರ ಮರಣ ಶಾಸನ ಪತ್ರದಲ್ಲಿ ನನ್ನ ಸಹಿಯನ್ನು ನೋಡುತ್ತಿದ್ದು, ಅದನ್ನು ನಿಪಿ–3(ಎ) ಎಂದು ಗುರುತಿಸಲಾಯಿತು.

ನಾನು ದಸ್ತಾವೇಜು ಬರಹಗಾರನಾಗಿದ್ದು , ಆ ಬಗ್ಗೆ ಪರವಾನಗಿಯನ್ನು ಹಾಜರುಪಡಿಸುತ್ತೇನೆ.

**ಈ ಹಂತದಲ್ಲಿ ವಕೀಲರ ಕೋರಿಕೆ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

*ಓದಿ ಹೇಳಿ ಕೇಳಿ ಸರಿ ಇದೆ.*

*1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಚಿತ್ರದುರ್ಗ.*